## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಆರ್.ವಿ.ಬಿದರಹಳ್ಳಿ, ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹೂವಿನ ಹಡಗಲಿ (ಮೂಲತ: ಕರ್ನಾಟಕ ಉದ್ಯಮಶೀಲ ಅಭಿವೃದ್ಧಿ ಕೇಂದ್ರ ಧಾರವಾಡ ಸೇವೆಗೆ ಸೇರಿದ ಅಧಿಕಾರಿ) ಇವರಿಗೆ ಸಂಬಂಧಿಸಿದಂತೆ ದಿನಾಂಕ:30.4.2016 ರಿಂದ 6.10.2016 ರವರಗಿನ ಅವಧಿಯನ್ನು ಕ್ರಮಬದ್ಧಗೊಳಿಸುವ ಬಗ್ಗೆ- ಆದೇಶ.

**ಓದಲಾಗಿದೆ :**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 190 ಸೇಶಿಕಾ 2015, ದಿನಾಂಕ:23.9.2015
2. ಸರ್ಕಾರದ ಅಧಿಸೂಚನೆ ಗ್ರಾಅಪ 201 ಸೇಶಿಕಾ 2016 (ಭಾ-1), ದಿ:07.9.2016.
3. ಶ್ರೀ ಆರ್.ವಿ.ಬಿದರಹಳ್ಳಿ ಇವರ ಮನವಿ ದಿನಾಂಕ:17.9.2016.
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 261 ಸೇಶಿಕಾ 2016, ದಿ:06.10.2016.

**ಪ್ರಸ್ತಾವನೆ:-**

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ವಿಜಯಪುರ ಇಲ್ಲಿನ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಆರ್.ವಿ.ಬಿದರಹಳ್ಳಿ, (ಮೂಲತ: ಕರ್ನಾಟಕ ಉದ್ಯಮಶೀಲ ಅಭಿವೃದ್ಧಿ ಕೇಂದ್ರ (ಸಿಡಾಕ್) ಧಾರವಾಡ) ಇವರ ಗುತ್ತಿಗೆ ಸೇವೆಯನ್ನು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:23.9:2015 ರ ಆದೇಶದಲ್ಲಿ ದಿನಾಂಕ: 30.4.2015 ರಿಂದ ಅನ್ವಯವಾಗುವಂತೆ ಮುಂದಿನ ಒಂದು ವರ್ಷದ ಅವಧಿಗೆ ಗುತ್ತಿಗೆ ಸೇವೆಯನ್ನು ಮುಂದುವರಿಸಲಾಗಿತ್ತು.

ಸದರಿಯವರು ಗುತ್ತಿಗೆ ಸೇವಾ ಅವಧಿಯು ಮೇಲೆ ಓದಲಾದ (1) ರ ಆದೇಶದನುಸಾರ ದಿನಾಂಕ:29.4.2006 ಕ್ಕೆ ಮುಕ್ತಾಯಗೊಂಡಿರುತ್ತದೆ. ಅದಾಗ್ಯೂ ಸದರಿಯವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯಪುರ ಇಲ್ಲಿನ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಮುಂದುವರಿಯುತ್ತಿರುವುದನ್ನು ಗಮನಿಸಿ, ಮೇಲೆ ಓದಲಾದ ಕ್ರಮಾಂಕ (2) ರ ಅಧಿಸೂಚನೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಇಲ್ಲಿಗೆ ಶ್ರೀ ಪಿ.ಎಂ.ಭಜಂತ್ರಿ ಇವರನ್ನು ಸ್ಥಳನಿಯುಕ್ತಿಗೊಳಿಸಿ, ಶ್ರೀ ಆರ್.ವಿ.ಬಿದರಹಳ್ಳಿ ಇವರನ್ನು ಅವರ ಮಾತೃ ಸಂಸ್ಥೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (3) ರಂದು ಶ್ರೀ ಆರ್.ವಿ.ಬಿದರಹಳ್ಳಿ ಇವರು ಮನವಿ ಸಲ್ಲಿಸಿ, ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯನಿರ್ವಹಿಸಲು ಇಚ್ಚೆ ಹೊಂದಿರುವುದಾಗಿ ತಿಳಿಸಿ, ಅವರನ್ನು ಖಾಲಿ ಇರುವ ಯಾವುದಾದರೊಂದು ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಸ್ಥಳನಿಯುಕ್ತಿಗೊಳಿಸುವಂತೆ ಕೋರಿದ್ದರು. ಸರ್ಕಾರವು ಸದರಿ ಮನವಿಯನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ (4) ರ ದಿನಾಂಕ:5.10.2016 ರ ಆದೇಶದಲ್ಲಿ ಸದರಿಯವರ ಗುತ್ತಿಗೆ ಸೇವೆಯನ್ನು ಮುಂದುವರಿಸಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹೂವಿನ ಹಡಗಲಿ ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

---2

ಶ್ರೀ ಆರ್.ವಿ.ಬಿದರಹಳ್ಳಿ ಇವರು ದಿನಾಂಕ:30.4.2016 ರಿಂದ 7.9.2016 ರವರಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯಪುರ ಇಲ್ಲಿನ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಸರ್ಕಾರದ ಆದೇಶವಿಲ್ಲದೇ ಕಾರ್ಯನಿರ್ವಹಿಸಿದ್ದು, ಸದರಿ ಅವಧಿಯನ್ನು ಆಡಳಿತಾತ್ಮಕವಾಗಿ ಕ್ರಮಬದ್ಧಗೊಳಿಸುವ ಅಗತ್ಯವಿರುವುದನ್ನು ಸರ್ಕಾರವು ಪರಿಶೀಲಿಸಿರುತ್ತದೆ. ಆದ್ದರಿಂದ ಮೇಲ್ಕಂಡ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಲು ಹಾಗೂ ದಿನಾಂಕ:10.9.2016 ರಿಂದ 6.10.2016 ರವರಗಿನ ಅವಧಿಯನ್ನು ಅವರ ಲೆಕ್ಕದಲ್ಲಿರುವ ರಜೆಯೆಂದು ಪರಿಗಣಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ, ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 190 ಸೇಶಿಕಾ 2015, ಬೆಂಗಳೂರು, ದಿ;25.5.2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಗಾಗಿ, ಶ್ರೀ ಆರ್.ವಿ.ಬಿದರಹಳ್ಳಿ, ಕಾರ್ಯಪಾಲಕ ಇಂಜಿನಿಯರ್ ಇವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯಪುರ ಇಲ್ಲಿ ದಿನಾಂಕ:30.4.2016 ರಿಂದ 09.9.2016 ರವರಗೆ ಸರ್ಕಾರದ ಆದೇಶವನ್ನು ನಿರೀಕ್ಷಿಸಿ, ಕಾರ್ಯನಿರ್ವಹಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡಿ ಸದರಿ ಅವಧಿಯನ್ನು ಈ ಆದೇಶದ ಮೂಲಕ **'ಕರ್ತವ್ಯದ ಅವಧಿ'** ಎಂದು ಪರಿಗಣಿಸಿದೆ.

ಶ್ರೀ ಆರ್.ವಿ.ಬಿದರಹಳ್ಳಿ, ಕಾರ್ಯಪಾಲಕ ಇಂಜಿನಿಯರ್ ಇವರಿಗೆ ದಿನಾಂಕ:10.9.2016 ರಿಂದ 6.10.2016 ರವರಗಿನ ಅವಧಿಗೆ ಅವರ ಲೆಕ್ಕದಲ್ಲಿರುವ ಗಳಿಕೆ ರಜೆಯನ್ನು ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
25/5/2017
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು,(ಎ ಮತ್ತು ಇ,) ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಯಪುರ/ಬಳ್ಳಾರಿ.
4. ನಿರ್ದೇಶಕರು, ಕರ್ನಾಟಕ ಉದ್ಯಮಶೀಲ ಅಭಿವೃದ್ಧಿ ಕೇಂದ್ರ (ಸಿಡಾಕ್) ಧಾರವಾಡ.
5. ಶ್ರೀ ಆರ್.ವಿ.ಬಿದರಹಳ್ಳಿ, ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹೂವಿನ ಹಡಗಲಿ.
6. ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
7. ಅಪರ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
8. ಶಾಖಾ ರಕ್ಷಾ ಕಡತ, ಹೆಚ್ಚುವರಿ ಪ್ರತಿ, ಕಂಪ್ಯೂಟರ್ ಸೆಲ್